


ಇಂಗ್ಲಿಷ್ ಮೂಲ:

**ಅಬ್ದುಲ್‌ರಜಾಕ್ ಗುರ್ನಾ**

**ಕನ್ನಡಕ್ಕೆ: ಎಸ್. ದಿವಾಕರ್**

ಕಲೆ: ಮುರಳೀಧರ ರಾಠೋಡ್


ಹಮೀದನಿಗೆ ಒಮ್ಮೊಮ್ಮೆ ತಾನು ಯಾವತ್ತಿನಿಂದಲೂ ಅಂಗಡಿಯಲ್ಲೇ ಇದ್ದುಬಿಟ್ಟಿರುವಂತೆ, ಅಲ್ಲಿಯೇ ತನ್ನ ಬದುಕು ಕೊನೆಗೊಳ್ಳುತ್ತಿರುವಂತೆ ಅನ್ನಿಸುತ್ತಿತ್ತು. ಅವನಿಗೀಗ ಮೊದಲಿನಂತೆ ತಲ್ಲಣವೇನೂ ಇರಲಿಲ್ಲ; ಒಂದು ಕಾಲದಲ್ಲಿ ಅಂಜಿಸಿ ಅಂಜಿಸಿ ಅವನ ಮನಸ್ಸನ್ನೇ ಖಾಲಿಮಾಡಿಬಿಡುತ್ತಿದ್ದ ರಾತ್ರಿಯ ರಹಸ್ಯ ಗುಸುಗುಸುವೂ ಕೇಳಿಸುತ್ತಿರಲಿಲ್ಲ. ಒಂದು ಕಾಲದಲ್ಲಿ ನಗರವನ್ನು ಬಡಾವಣೆಗಳಿಂದ ಬೇರ್ಪಡಿಸಿದ್ದ, ಸದಾ ಜನರಿಂದ ಗಿಜಿಗುಡುತ್ತಿದ್ದ ಜೌಗು ಪ್ರದೇಶದಿಂದಲೇ ಆ ಗುಸುಗುಸು ಕೇಳಿಸುತ್ತಿತ್ತೆಂದು ಅವನಿಗೀಗ ಗೊತ್ತಾಗಿತ್ತು. ಅಂಗಡಿ ಇದ್ದದ್ದು ನಗರದ ಬಡಾವಣೆಗಳನ್ನು ಕೂಡಿಸುತ್ತಿದ್ದ ಒಂದು ಮುಖ್ಯ ರಸ್ತೆಯಲ್ಲಿ; ಒಳ್ಳೆ ಆಯಕಟ್ಟಿನ ಜಾಗದಲ್ಲಿ. ಹಮೀದ್ ಕೆಲಸಗಾರರು ಬೆಳಗ್ಗೆ ಮನೆಯಿಂದ ಹೊರಡುವ ಸಮಯಕ್ಕೇ ಅಂಗಡಿ ತೆರೆಯುತ್ತಿದ್ದ. ರಾತ್ರಿ ಎಷ್ಟೋ ಹೊತ್ತಿನ ಮೇಲೆ ಒಬ್ಬಿಬ್ಬರು ತಮ್ಮ ತಮ್ಮ ಮನೆಗಳನ್ನು ಸೇರಿಕೊಳ್ಳುವವರೆಗೂ ಮುಚ್ಚುತ್ತಿರಲಿಲ್ಲ. ಹಾಗೆ ನೋಡಿದರೆ, ಇಡೀ ಜೀವನವೇ ಅವನನ್ನು ಹಾದು ಹೋಗುತ್ತಿತ್ತೆನ್ನಬೇಕು. ಒಳ್ಳೆಯ ವ್ಯಾಪಾರವಾಗುವ ಸಮಯದಲ್ಲಿ ಲವಲವಿಕೆಯಿಂದಿರುತ್ತಿದ್ದ ಅವನು ಗಿರಾಕಿಗಳ ಜೊತೆ ಮಾತಾಡುತ್ತಾ, ತಮಾಷೆ ಮಾಡುತ್ತಾ ತುಂಬ ಚಾಲಾಕಿನಿಂದ ತನ್ನ ಸರಕನ್ನು ಮಾರುವುದರಲ್ಲೇ ಸುಖ ಕಾಣುತ್ತಿದ್ದ. ಆಮೇಲೆ, ಸಂಪೂರ್ಣ ದಣಿದುಹೋಗಿ ಪೀಠವೂ ಗಲ್ಲಾ ಪೆಟ್ಟಿಗೆಯೂ ಒಂದೇ ಆಗಿದ್ದ ಬಾಕ್ಸಿನ ಮೇಲೆ ಕುಸಿದು ಕೂರುತ್ತಿದ್ದ.

ಒಂದು ಸಂಜೆ ಸಾಕಷ್ಟು ಹೊತ್ತಾದ ಮೇಲೆ, ಇನ್ನು ಬಾಗಿಲು ಹಾಕಬೇಕು ಎಂದವನು ಅಂದುಕೊಳ್ಳುತ್ತಿರುವಾಗಲೇ, ಆ ಹುಡುಗಿ ಅಂಗಡಿಗೆ ಬಂದಳು. ಅವನಾಗಲೇ ಎರಡು ಬಾರಿ ತೂಕಡಿಸಿದ್ದ —ಅಂತಹ ಸಮಯದಲ್ಲಿ ಹಾಗೆ ತೂಕಡಿಸುವುದು ಅಪಾಯವೆಂದು ಗೊತ್ತಿದ್ದೂ. ಯಾವುದೋ ಒಂದು ಭಾರಿ ಕೈಯಿ ತನ್ನ ಕುತ್ತಿಗೆಯನ್ನು ಹಿಡಿದುಕೊಂಡು ಮೇಲಕ್ಕೆತ್ತುತ್ತಿರುವಂತೆ ಅನ್ನಿಸಿದ್ದೇ ಬೆಚ್ಚಿಬಿದ್ದು ಎಚ್ಚರಗೊಂಡ. ಹುಡುಗಿ ಅವನ